ಕಾವು ಕೊಟ್ಟು ಕನಸುಗಳಿಗೆ ರೆಕ್ಕೆ ಕಟ್ಟಿದನು. ಕಿರಿಯ ರಾಣಿ ಅತ್ಯಂತ ಖುಶಿಯಾಗುತ್ತಿದ್ದ ಸಮಾಚಾರ ಬಂತು. ಮಹಾರಾಜನೂ ಬಹಳ ಖುಶಿಯಾಗಿ ತಾನಿತ್ತ ಆಶ್ವಾಸನೆ ಪ್ರಕಾರ ಕಾಲಕಾಲಕ್ಕೆ ಮಧುರಮತಿಗೆ ಭಕ್ಷೀಸನ್ನು ತಲುಪಿಸಿದನು. ಅದರಿಂದ ಮಧುರಮತಿಯು ಬಡತನ ರೇಖೆಗಿಂತ ಚೂರು ಮೇಲಕ್ಕೆ ಬರಲು ಸಾಧ್ಯವಾಯಿತು. ಆದರೂ ಮಧುರಮತಿಯ ಹೆಂಡತಿ ತಾರಾಳಿಗೆ ತನಗೊಂದು ಕಂಠಹಾರ ಮಾಡಿಸಿಕೊಳ್ಳುವ ಅನುಕೂಲ ಬರಲಿಲ್ಲ ಎನ್ನುವ ಕೊರಗು ಕಾಡುತ್ತಿತ್ತು. ತನ್ನ ಮನದಾಸೆಯನ್ನು ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯಲ್ಲಿ ಪರೋಕ್ಷವಾಗಿ ಹೇಳಿಯೂ ನೋಡಿದಳು. ಆದರೆ ಮಧುರಮತಿಯು ಪ್ರತಿಬಾರಿಯೂ, ''ನಲ್ಲೆ, ನಿನಗೆ ತೊಡಿಸಲೇ, ಮುತ್ತಿನ ಹಾರ ಈಗಲೇ?" "ನಲ್ಲೆ, ನಿನ್ನ ಕೊರಳಿಗೆ ಇದೋ ನನ್ನೊಲವಿನ ಮಾಲೆ" ಹೀಗೆ ನಾಟಕೀಯ ಸಾಲುಗಳಿಂದ ಅವಳನ್ನು ರಮಿಸಲು ನೋಡುತ್ತಿದ್ದನು. ಆದರೆ ಮಧುರಮತಿಯ ರಸಿಕ ಕಾವ್ಯದಿಂದ ಅವಳ ಕೊರಳು ಇನ್ನಷ್ಟು ಬಿಗಿದುಬರುತ್ತಿತ್ತೇ ವಿನಃ ಮನಸು ಅರಳುತ್ತಿರಲಿಲ್ಲ.

ಕವಿಗಳ ಗುಡಿಸಲ ಬದುಕು ಹಗಲು ರಾತ್ರಿಗಳಲ್ಲಿ ಹೀಗೆ ಅನಾಮಿಕವಾಗಿರಲು ಅತ್ತ ಅರಮನೆಯಲ್ಲಿ ಕಿರಿಯ ರಾಣಿಗೆ ಇದ್ದಿಲು ತಿನ್ನುವ ಬಯಕೆಯಾಯಿತು. ಪ್ರಾರಂಭದಲ್ಲಿ ಮಹಾರಾಜ ಕಳಿಸುತ್ತಿದ್ದ ಕಾವ್ಯ ಸಂದೇಶಗಳಿಂದ ಅವಳ ಮನಸ್ಸು ಹಕ್ಕಿಯಂತೆ ಹಾರಾಡಿದ್ದು ನಿಜ. ಮುದಗೊಳಿಸುವ ಸಾಲುಗಳಿಂದ ಅವಳ ಉತ್ಸಾಹ ಹೊರಚೆಲ್ಲುವಷ್ಟು ತುಳುಕಾಡಿತು. ಆದರೆ ಬರಬರುತ್ತಾ ಅವೇ ಸಾಲುಗಳು ಇನ್ನಷ್ಟು ಬೇಚೈನಿಗೂ ಕಾರಣವಾದವು. ಕಾವ್ಯ ಸಾಲುಗಳು ಅರ್ಧ ಮನಸ್ಸನ್ನು ತುಂಬಿದರೆ ಇನ್ನರ್ಧ ಖಾಲಿಖಾಲಿ ಎನಿಸುವಂತೆ ಮಾಡುತ್ತಿದ್ದವು. ಸೌಂದರ್ಯದ ಸಾಲುಗಳನ್ನು ಮತ್ತೆ ಮತ್ತೆ ಓದುವಾಗ ಮನಸ್ಸು ತುಂಬಿದಂತೆ ಅನಿಸಿದರೂ ಒಂದು ರೀತಿಯ ವಿಷಾದದ ಎಳೆಯೂ ಖಾಲಿತನವನ್ನು ಉದ್ದೀಪಿಸುವಂತೆ ಅನಿಸುತ್ತಿತ್ತು. ಮಹಾರಾಜನು ಕಾವ್ಯದ ಸಾಲುಗಳನ್ನು ಓದುವಾಗ ಅವು ಅವನ ಹೃದಯಾಳದಿಂದ ಬಂದಂತೆ ಅನಿಸುತ್ತಿರಲಿಲ್ಲ. ಕಾವ್ಯದ ಭಾವ ಲಯಗಳು ಬರೀ ನಾಲಿಗೆ ತುದಿಯ ಸದ್ದುಗಳಂತೆ ಕೇಳಿಸಿದವು. ಮಹಾರಾಜ ಎದುರಲ್ಲಿ ಕಾವ್ಯ ವಾಚಿಸುವಾಗ ಕಣ್ಣುಮುಚ್ಚಿ ಕಾವ್ಯ ಆಸ್ವಾದನೆ ಮಾಡುವಳು. ದೂರದಿಂದ ಬಿಳಿಯ ಕುದುರೆಯೇರಿ ಬರುವ ಸರದಾರನ ಚಿತ್ರವೊಂದು ಕಾಣಿಸಿದಂತಾಗಿ ಬೆಚ್ಚಿ ಕಣ್ಣು ತೆರೆಯುವಳು. ಮನಸ್ಸಲ್ಲಿಯ ಕೊರಗು ಏನು ಏನು ಅದೇನು ಅನ್ನುವುದೇ ಕಿರಿಯರಾಣಿಗೆ ತಿಳಿಯಲಿಲ್ಲ. ಕಿಟಕಿಯೆದುರು ನಿಂತು ನೀಲಾಕಾಶವನ್ನು ದಿಟ್ಟಿಸುತ್ತಾ ನಿಂತು ಬಿಡುವಳು. ಶೂನ್ಯದಲ್ಲಿ ದೃಷ್ಟಿಯಿಟ್ಟು ನಿಂತಿರಲು ರಾಣಿಮಹಲ್ ಪಕ್ಕದ ಬೀದಿಯಿಂದ ಕುದುರೆಯೇರಿ ಸಾಗುವ ಕುಡಿಮೀಸೆಯ ಸೇನಾಪತಿ ಕಣ್ಣಿಗೆ ಬೀಳುತ್ತಿದ್ದನು. ಶುರುವಿನಲ್ಲಿ ಒಂದು ಬಿಂಬವಾಗಿಯಷ್ಟೇ ಅವಳ ಪ್ರಜ್ಞೆಯಲ್ಲಿ ಹಾದುಹೋಗುತ್ತಿದ್ದನು. ಆದರೆ ಸೇನಾಪತಿ ಕಾಣದ ದಿನ ಅನುಭವಕ್ಕೆ ಬಂದ ಶೂನ್ಯವು ಕುದುರೆಯೇರಿ ಬರುವ ಸರದಾರನ ಮುಖ ಸ್ಪಷ್ಟಗೊಳಿಸಿತು. ದಿನವೂ ಅರಮನೆಯತ್ತ ಸಾಗುವ ಸೇನಾಪತಿಯ ಆಗಮನದ ಸಮಯದಲ್ಲಿ ಕಿರಿಯ ರಾಣಿ ಕಿಟಕಿಯಲ್ಲಿ ನಿಲ್ಲುವಂತಾಯಿತು. ಆತನನ್ನು ಕಂಡಾಗ ಅವಳ ಮನದಲ್ಲಿ ವಿಚಿತ್ರ ಸಂಚಲನ ಉಂಟಾಗುತ್ತಿತ್ತು. ತನ್ನ ಮನಸ್ಸಿನಲ್ಲಿಯ ಕಾವ್ಯ ಪುರುಷ ಇವನೇ ಇವನೇ ಎನ್ನುವುದು ಕಿರಿಯ ರಾಣಿಗೆ ನಿಚ್ಚಳವಾಯಿತು!

ಕಾರ್ತಿಕ ಮಾಸದಲ್ಲಿ ಎಲ್ಲರೂ ಹಬ್ಬ ಉತ್ಸವಗಳ ಸಂಭ್ರಮದಲ್ಲಿದ್ದಾಗ ಕಿರಿಯ ರಾಣಿಯು ಸಖಿಯರೊಂದಿಗೆ ವನವಿಹಾರಕ್ಕೆಂದು ತೆರಳಿದ್ದಳು. ರಾಜನು ತುರ್ತುಕಾರ್ಯ ನಿಮಿತ್ತ